ಓ.ಎಸ್.ನಂ.68/2023

ಡಿ ಡಬ್ಲ್ಯೂ: 1

ದಿನಾಂಕ 03.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>**

ನಾನು 5 ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಮೂಲ ಊರು ರಾಣೆಬೆನ್ನೂರು ತಾಲೂಕಿನ ಹನುಮನಹಳ್ಳಿ ಎಂದರೆ ಸರಿ. ದಾವಾ ಆಸ್ತಿಗಳು ನನ್ನ ತಂದೆಯಿಂದ ಬಂದ ಆಸ್ತಿಗಳು ಎಂದರೆ ಸರಿಯಲ್ಲ. ನಾವು ಒಟ್ಟು 5 ಜನ ಸಹೋದರರು. ದಾವಾ ಆಸ್ತಿಗಳು ನನ್ನ ಸ್ವಯಾರ್ಜಿತ ಆಸ್ತಿಯಾಗಿರುವ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆ ರೀತಿ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**2.** ಸರ್ವೆ ನಂ 37/6 3 ಎಕರೆ 4 ಗುಂಟೆ ಮತ್ತು 37/8 2 ಎಕರೆ 3 ಗುಂಟೆ ನಮ್ಮ ಮನೆತನದ ಆಸ್ತಿಗಳು ಎಂದರೆ ಸರಿ. ನನ್ನ ತಂದೆಯ ಮರಣದ ನಂತರ ನಾನು ಮತ್ತು ನನ್ನ ಸಹೋದರರ ನಡುವೆ 2019 ನೇ ಸಾಲಿನಲ್ಲಿ ದಾವಾ ಆಸ್ತಿಗಳ ಕುರಿತು ಪಾಲು ವಾಟ್ನಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಪಾಲು ವಾಟ್ನಿಯಂತೆ ದಾವಾ 1 ನೇ ಆಸ್ತಿಯು ನನ್ನ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಅದೇ ರೀತಿ ದಾವಾ ಬ ಸ್ವತ್ತುಗಳು ಸಹ ನನಗೆ ಪಾಲು ವಾಟ್ನಿಯಿಂದ ಬಂದಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಆಸ್ತಿಗಳು ನನ್ನ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ ಎಂದು ನುಡಿಯುತ್ತಾರೆ.

**3.** ನನ್ನ ಮತ್ತು ನನ್ನ ಸಹೋದರನ ವಿವಾಹವು 19.05.1986 ರಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ನನ್ನ ವಿವಾಹವು 2 ನೇ ವಾದಿಯ ಜೊತೆ ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ವಿವಾಹದಿಂದ 1 ನೇ ವಾದಿ ಜನಿಸಿರುತ್ತಾರೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಗಳು ನನ್ನ ಮತ್ತು 2 ನೇ ಪತ್ನಿ ಶಾಮಲಾ ಮಕ್ಕಳು ಎಂದರೆ ಸಾಕ್ಷಿಯು ಆಕೆಯು ನನ್ನ ಮೊದಲ ಪತ್ನಿಯಾಗಿರುವುದಾಗಿ ನುಡಿಯುತ್ತಾರೆ. ಸದರಿ ಪತ್ನಿ ಮತ್ತು 2 ಮತ್ತು 3 ನೇ ಪ್ರತಿವಾದಿಗಳು ನನ್ನ ವಿರುದ್ಧ ಓ ಎಸ್ ನಂ 85/2025 ರಂತೆ ಪಾಲು ವಾಟ್ನಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಪಕ್ಷಗಾರನಾಗಿದ್ದು ಹಾಜರಾಗಿರುತ್ತೇನೆ ಎಂದರೆ ಸರಿ.

**4.** ಸದರಿ ಓ ಎಸ್ ನಂ 85/2025 ರ ದಾವೆಯಲ್ಲಿ ಈ ದಾವೆಯ ವಾದಿಗಳು ಮೊದಲ ಪತ್ನಿ ಮತ್ತು ಮಗಳು ಎಂದು ಬರೆಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಅ ಆಸ್ತಿಯನ್ನು ದಿನಾಂಕಃ 19.04.2022 ರಂದು ದಾನ ಪತ್ರದ ಮೂಲಕ 2 ನೇ ಪ್ರತಿವಾದಿಯ ಹೆಸರಿಗೆ ಬರೆದುಕೊಟ್ಟಿರುತ್ತೇನೆ ಎಂದರೆ ಸರಿ. ವಾದಿಗಳಿಗೆ ಯಾವುದೇ ಹಿಸ್ಸಾ ನೀಡಬಾರದು ಎಂಬ

ಉದ್ದೇಶದಿಂದ ದಾನ ಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**5.** ದಾವಾ ಆಸ್ತಿಗಳು ನನ್ನ ಪಿತ್ರಾರ್ಜಿತ ಆಸ್ತಿಗಳು ಆದ ಕಾರಣ ನನಗೆ ಯಾವುದೇ ಸಂಪೂರ್ಣ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನಗೆ ಮತ್ತು ವಾದಿಗಳಿಗೆ ಮಾತ್ರ ದಾವಾ ಆಸ್ತಿಗಳಲ್ಲಿ ಸಮಾನ ಹಕ್ಕು ಹಿಸ್ಸಾ ಇರುತ್ತದೆ ಎಂದರೆ ಸರಿಯಲ್ಲ. ದಾನ ಪತ್ರ ಬರೆದುಕೊಟ್ಟಿರುವ ವಿಷಯ ತಿಳಿದ ನಂತರ ವಾದಿಗಳು ನನ್ನ ಬಳಿ ಬಂದು ಹಿಸ್ಸಾ ಕೇಳಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗಳಿಗೆ ಹಿಸ್ಸಾ ನೀಡಬಾರದು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

Sd/-

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.